ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಅ) ಶಾಂತಿಯುತವಾದ ಕಾರ್ಮಿಕ ವಿವಾದಗಳಲ್ಲಿ ಆರಕ್ಷಕರು ಮಧ್ಯ ಪ್ರವೇಶಿಸಿ ಕಾರ್ಮಿಕರ ಮೇಲೆ ಅಶ್ರುವಾಯು ಹಾಗೂ ಲಾಠಿ ಪ್ರಹಾರಗಳನ್ನು ಮಾಡಿರುವುದಿಲ್ಲ.

ಆ) ಶಾಂತಿಯುತವಾಗಿ ಮುಷ್ಕರ ನಡೆಸುತ್ತಿರುವ ಕಾರ್ಮಿಕರ ಮೇಲೆ ಲಾಠಿ ಪ್ರಹಾರ ಮಾಡಿರುವುದಿಲ್ಲ. ಆದರೆ ದಿನಾಂಕ 29-12-1983ರಂದು ವಿಡಿಯಾ (ಇಂಡಿಯಾ)ದ ಮುಷ್ಕರ ಹೂಡಿದ ಕಾರ್ಮಿಕರು ಇತರ ಕಾರ್ಮಿಕರು ಕಾರ್ಖಾನೆಯ ಆವರಣದೊಳಕ್ಕೆ ಪ್ರವೇಶಿಸಲು ಅಡ್ಡಿಪಡಿಸಿದಾಗ ಆರಕ್ಷಕರುಗಳು ಇದನ್ನು ತಡೆಯಲು ಹೋದಾಗ ವಿಡಿಯಾ (ಇಂಡಿಯಾ) ಮತ್ತು ಸರಹದ್ದಿನ ಕೆಲವು ಮುಷ್ಕರ ಹೂಡಿದ ಕಾರ್ಮಿಕರು ಪೋಲೀಸರ ಮೇಲೆ ಕಲ್ಲನ್ನು ತೂರಿದಾಗ ಮತ್ತು ಪರಿಸ್ಥಿತಿಯು ವಿಕೋಪಕ್ಕೆ ತಲುಪಿದಾಗ ಪೋಲೀಸರು ಅಶ್ರುವಾಯು ಮತ್ತು ಲಾಠಿಯನ್ನು ಉಪಯೋಗಿಸಿದ್ದು ನಿಜವಿರುತ್ತೆ.

ಇ) ಕಾರ್ಮಿಕ ವಿವಾದಗಳಲ್ಲಿ ಪೋಲೀಸರು ಮಧ್ಯ ಪ್ರವೇಶಿಸುತ್ತಿಲ್ಲ.

ಈ) ಪೋಲೀಸರು ತಾರೀಖು 29-12-1983ರಂದು ವಿಡಿಯಾ (ಇಂಡಿಯಾ) ಕಾರ್ಮಿಕರ ಮೇಲೆ ಅಶ್ರುವಾಯು ಮತ್ತು ಲಾಠಿಯನ್ನು ಉಪಯೋಗಿಸುವ ಸಂದರ್ಭವಿದ್ದದ್ದರಿಂದ ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

**ವಿಷಯ : ಮಂತ್ರಿಗಳ ಬಾಬತ್ತು ಆದ ವೆಚ್ಚ**

ಪ್ರಶ್ನೆ : 178 (626) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 10-1-1983 ರಿಂದ 31-12-1983ರವರೆಗೆ ಪ್ರತಿಯೊಬ್ಬ ಮಂತ್ರಿಗಳಿಗಾಗಿ ಮಾಡಿರುವ ಒಟ್ಟು ವೆಚ್ಚ ;

ಆ) ವಿವಿಧ ಲೆಖ್ಖ ಶೀರ್ಷಿಕೆಗಳ ಅಡಿಯಲ್ಲಿ ಪ್ರತಿಯೊಬ್ಬ ಮಂತ್ರಿಗಳಿಗೂ ಯಾವ ಬಗ್ಗೆ ಮತ್ತು ಎಷ್ಟು ವೆಚ್ಚ ಮಾಡಲಾಗಿದೆ ;

ಇ) ಸರಳತೆಯನ್ನು ಕಾಪಾಡಲು ಈ ವೆಚ್ಚಗಳನ್ನು ಇಳಿಸಲು ಯಾವುದೇ ಯೋಜನೆ ಇದೆಯೆ ?

ಉತ್ತರ : ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಅ) ಮತ್ತು

ಆ) ಲಗತ್ತಿಸಿರುವ ತಃಖ್ತೆಯನ್ನು ನೋಡಬಹುದು.

ಇ) ಆದಷ್ಟು ಕಡಿಮೆ ಮಟ್ಟದಲ್ಲಿ ವೆಚ್ಚ ಮಾಡಲಾಗುತ್ತಿದೆ.

**(ಅ) ಮತ್ತು (ಆ) ಗೆ ಸಂಬಂಧಿಸಿರುವ ತಃಖ್ತೆಯನ್ನು ಪುಟ 392 ಮತ್ತು 393ರಲ್ಲಿ ಕೊಡಲಾಗಿದೆ.**

ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ರಾಮದೇವ್‌ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 626ರ ಉತ್ತರಗಳಿಗೆ ಅನುಬಂಧ

| ಮಂತ್ರಿಗಳು | 3 ಮತ್ತು 4ನೇಯ ಅಂಕಣಗಳ ಒಟ್ಟು ವೆಚ್ಚ | 213 — ಸಚಿವ ಸಂಪುಟ ಮಂತ್ರಿವರ್ಯರ ಸಂಬಳ, ತುಟ್ಟಿಭತ್ಯ, ಪ್ರಯಾಣ ಭತ್ಯ, ದೂರವಾಣಿ, ಹಾಗೂ ವಾಹನಗಳ ದುರಸ್ತಿಗಳ ವೆಚ್ಚ | 283 — ವಸತಿ ಮಂತ್ರಿವರ್ಯರ ಗೃಹಗಳನ್ನು ಸಜ್ಜುಗೊಳಿಸುವ ಸಂಬಂಧದಲ್ಲಿ ಆಗಿರುವ ವೆಚ್ಚ |
|---|---|---|---|
| 1 | 2 | 3 | 4 |
| | ರೂಪಾಯಿಗಳಲ್ಲಿ | ರೂಪಾಯಿಗಳಲ್ಲಿ | ರೂಪಾಯಿಗಳಲ್ಲಿ |
| ಮುಖ್ಯ ಮಂತ್ರಿಗಳು | 1,39,306-93 | 1,39,306-93 | — |
| ಕೈಗಾರಿಕಾ ಮಂತ್ರಿಗಳು | 3,72,610-55 | 2,02,135-55 | 1,70,475-00 |
| ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು | 2,51,709-49 | 1,45,799-49 | 1,05,910-00 |
| ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು | 2,51,843-81 | 1,13,812-81 | 1,38,031-00 |
| ವಿದ್ಯಾ ಮಂತ್ರಿಗಳು | 2,24,184-56 | 76,819-56 | 1,47,365-00 |
| ಕಂದಾಯ ಮಂತ್ರಿಗಳು | 3,65,260-00 | 2,12,907-00 | 1,52,353-00 |
| ಕಾನೂನು, ಸಂಸದೀಯ ವ್ಯವಹಾರಗಳು, ಸಾರ್ವಜನಿಕ ಕುಂದುಕೊರತೆಗಳು ಹಾಗೂ ವಸತಿ ಮಂತ್ರಿಗಳು | 69,339-70 | 68,048-70 | 1,291-00 |
| ಸಮಾಜ ಕಲ್ಯಾಣ ಹಾಗೂ ರೇಷ್ಮೆ ಮಂತ್ರಿಗಳು | 2,08,774-36 | 1,75,995-36 | 32,779-00 |
| ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು | 2,68,168-80 | 1,50,641-80 | 1,17,527-00 |
| ಕೃಷಿ ಮಂತ್ರಿಗಳು | 2,71,270-31 | 1,62,880-31 | 1,08,390-00 |

| 1 | 2 | 3 | 4 |
|---|---|---|---|
| ಕಾರ್ಮಿಕ ಮತ್ತು ವಕ್ಫ್ ಮಂತ್ರಿಗಳು | 2,54,182.69 | 1,28,138-69 | 1,26,044-00 |
| ಸಹಕಾರ ಮಂತ್ರಿಗಳು | 2,28,172-65 | 1,06,945-65 | 1,21,227-00 |
| ಪಶು ಸಂಗೋಪನೆ, ಪಶುವೈದ್ಯಕೀಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು | 2,96,544-55 | 1,39,108-55 | 1,57,436-00 |
| ನಗರಾಭಿವೃದ್ಧಿ ಮಂತ್ರಿಗಳು | 1,78,797.76 | 1,07,459-76 | 71,338-00 |
| ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು | 1,97,955-55 | 1,02,165-55 | 95,810-00 |
| ವಾರ್ತಾ, ಪ್ರಚಾರ ಮತ್ತು ಪ್ರವಾಸ ಮಂತ್ರಿಗಳು | 2,88,542-50 | 1,16,015-50 | 1,72,527-00 |
| ಅರಣ್ಯ ರಾಜ್ಯ ಮಂತ್ರಿಗಳು | 2,36,891-50 | 1,35,678-50 | 1,01,213-00 |
| ಸಾರಿಗೆ ರಾಜ್ಯ ಮಂತ್ರಿಗಳು | 2,33,431-42 | 1,52,860-42 | 80,561-00 |
| ಕೃಷಿ ರಾಜ್ಯ ಮಂತ್ರಿಗಳು | 1,81,237-25 | 1,01,061.25 | 80,176-00 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು | 2,99,942-73 | 1,66,120.73 | 1,33,822-00 |
| ಯುವಜನ ಸೇವೆ ಹಾಗೂ ಕ್ರೀಡಾ ಮಂತ್ರಿಗಳು | 2,84,585-65 | 1,57,425-65 | 1,27,160.00 |
| ಗೃಹ ರಾಜ್ಯ ಮಂತ್ರಿಗಳು | 3,22,750-80 | 1,77,385.80 | 1,45,365-00 |
| ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು | 2,33,739-77 | 99,971-77 | 1,33,768-00 |
| ಮೀನುಗಾರಿಕೆ ರಾಜ್ಯ ಮಂತ್ರಿಗಳು | 2,25,157-55 | 1,31,845-55 | 93,312-00 |